ಗುರುಪ್ರಸಾದ್ ಕಂಟಲಗೆರೆ

ಕಲೆ: ಸಂತೋಷ್ ಸಸಿಹಿತ್ಲು

# ಫ್ರೀಡಂ ಪಾರ್ಕ್‌ನ ಹೂವು

ನಟ ಇನ್ನೂ ಹಾಸಿಗೆಯಿಂದ ಎದ್ದಿರಲಿಲ್ಲ. ನಿನ್ನೆ ರಾತ್ರಿ ಮಲಗುವಾಗ ನಿರ್ಧರಿಸಿದಂತೆಯೇ ಇಂದು ಎಂಟುಗಂಟೆಯಾದರೂ ಪರವಾಗಿಲ್ಲ ಕಣ್ತುಂಬ ನಿದ್ದೆ ಮಾಡಿ ಆಗಿರುವ ಆಯಾಸವನ್ನೆಲ್ಲ ಕಳೆದುಕೊಳ್ಳಬೇಕು ಎಂದು ಸೊಕ್ಕ ಸೊರ್ಗ ನಿದ್ರೆಗೆ ಜಾರಿದ್ದ. ಹಾಸಿಗೆಯ ಮಗ್ಗುಲಲ್ಲೆ ಇಟ್ಟುಕೊಂಡಿದ್ದ ಮೊಬೈಲ್ ಬೆಳಗ್ಗೆ ಇನ್ನು ಆರುಗಂಟೆ ಆಗುವುದಕ್ಕೂ ಮುನ್ನವೆ ಬಡಿದುಕೊಳ್ಳಲು ಶುರುವಾಯಿತು. ನಟರಾಜನಿಗೆ ನಿದ್ರೆ ಮೊಂಪರಿನಲ್ಲೆ ಎಲ್ಲೋ ಫೋನ್ ಹೊಡೆದುಕೊಳ್ಳುತ್ತಿರುವುದು ಕೇಳಿಸಿತಾದರೂ ಪಕ್ಕದ ಕಾಟಿನ ರಮೇಶನದಾಗಿರಲೆಂದು ಆಶಿಸಿ ಸುಮ್ಮನಿದ್ದ. ಈಗ ಖುದ್ದು ರಮೇಶನೆ, ‘ಹೆ ನಟ, ನಿಂದೆ ಕಣೊ ಮೊಬೈಲ್ ರಿಂಗ್ ಆಗ್ತಿದೆ’ ಎಂದು ಎಚ್ಚರಿಸಿದ್ದರಿಂದ, ರಾತ್ರಿ ಈ ಮೊಬೈಲ್ ಏರೊಪ್ಲೇನ್ ಮೋಡ್‌ಗೆ ಹಾಕಬೇಕೆಂದುಕೊಂಡಿದ್ದವನು, ಅಂದುಕೊಂಡದ್ದನ್ನ ಮಾಡುವಷ್ಟರಲ್ಲಿ ನಿದ್ರೆ ಆವರಿಸಿ, ಸ್ವಿಚ್ ಬೋರ್ಡ್‌ನಲ್ಲಿದ್ದ ಚಾರ್ಜರ್‌ಗೆ ಕನೆಕ್ಟ್ ಮಾಡಿದ್ದೂ ನೆನಪಿಲ್ಲದಂತೆ ನಿದ್ರೆಹೋಗಿದ್ದ. ಈಗ ರಿಂಗ್ ಆಗುತ್ತಿರುವ ಮೊಬೈಲ್‌ಗಾಗಿ ಅತ್ತಿತ್ತ ನೋಡಿದಾಗ ಅದಿನ್ನೂ ಚಾರ್ಜ್ ಆಗುತ್ತಲೇ ಇದ್ದುದು ಕಂಡುಬಂದು ಪೆಚ್ಚೆನಿಸಿ, ಕಿತ್ತು ಕಿವಿಗೇರಿಸಿಕೊಂಡು ‘ಏನೊ ಮಂಜ’ ಎಂದ. ಆ ಕಡೆಯಿಂದ ಮಂಜ, ‘ಏನಮ್ಮ ನಟ ಪೇಪರ್‌ನಲ್ಲಿ ಮಿಂಚ್ತೆದಿಯ, ಇವತ್ತು ಫ್ರಂಟ್ ಪೇಜ್ ತುಂಬ ನೀನೇ ಇದಿಯಲ್ಲೊ’ ಅಂದ. ನಟನಿಗೆ ಏನೂ ಅರ್ಥವಾಗದೆ, ‘ಅದೇನು ಸರಿಯಾಗಿ ಹೇಳೊ’ ಅಂದ. ಕೆಳಗೆಹೋಗಿ ಪ್ರಜಾವಾಣಿ ಪೇಪರ್ ತಗಂಡು ನೋಡು ಗೊತ್ತಾಗುತ್ತೆ ಅಂದ. ಇದೇನಿದು ಮಂಜ ಇಂಗೇಳ್ತಿದಾನೆ ಎಂದು ಇನ್ನೂ ತಬ್ಬಿಬ್ಬಾದ ನಟ ಅರ್ಜೆಂಟಾಗಿ ಅಲ್ಲೇ ಇದ್ದ ಟವಲ್ ಒಂದನ್ನ ಸುತ್ತಿಕೊಂಡು ಮೇಲಿನ ರೂಮಿನಿಂದ ಕೆಳಗಿಳಿದು ಪೇಪರ್ ಇರುವ ಡೈನಿಂಗ್ ಹಾಲ್ ಕಡೆಗೆ ನಡೆದ. ಅದಾಗಲೆ ಪೇಪರ್ ಓದಿ ಮುಗಿಸಿ ಮೆಟ್ಟಿಲೇರಿ ಬರುತ್ತಿದ್ದ ಇನ್ನೊಬ್ಬನೂ ನಗುಮೊಗದಿ ಹಾಗೆ ಹೇಳಿದಾಗ, ಅಯ್ಯೊ ಇವನೂ

